**<u>ಸಾಕ್ಷಿಯನ್ನು ಪ್ರಮಾಣ ವಚನ ಭೋಧಿಸಲಾದ ದಿನಾಂಕಃ 13-01-2026</u>**

**<u>ದಾಖಲೆಗಳನ್ನು ಗುರುತಿಸುವುದಕ್ಕಾಗಿ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ವಿ ಎನ್ ಪಿ ವಕೀಲರಿಂದಃ</u>**

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ನನಗೆ ಗೊತ್ತಿದ್ದು, ಅವುಗಳು ಸತ್ಯವಾಗಿವೆ ಮತ್ತು ಅದರಲ್ಲಿರುವ ಸಹಿ ನನ್ನದೆ ಆಗಿರುತ್ತದೆ.

1. ನೊಂದಾಯಿತ ಖರೀದಿ ಕರಾರ ಪತ್ರವನ್ನು ನಿಪಿ.1 ಎಂದು ಗುರುತಿಸಲಾಯಿತು.
2. ಸಾಕ್ಷಿಯು ಪ್ರತಿವಾದಿ ನಂ.1 ರಿಂದ 6 ರವರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.1(ಎ) ಯಿಂದ ನಿಪಿ.1(ಎಫ್) ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1(ಜಿ) ಎಂದು ಗುರುತಿಸಲಾಯಿತು. ಹಾಗೂ ಸಾಕ್ಷಿದಾರರಾದ 6 ಜನರು ಸಹಿ ಮಾಡಿದ್ದು, ಅವರುಗಳು 1)ಸೂರ್ಯಾಜಿ ಪಾಟೀಲ , 2) ವಿಲಾಸ ಪಾಟೀಲ, 3) ರಾಮಚಂದ್ರ ಪಾಟೀಲ, 4) ಪ್ರಮೋದ ಸಾಬಳೆ, 5) ದೇವಪ್ಪಾ ಕದಮ, 6) ಪಿರಾಜಿ ಕದಮ, ಸಾಕ್ಷಿಯು ಅವರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.1(ಎಚ್) ರಿಂದ ನಿಪಿ.1(ಓ) ಎಂದು ಗುರುತಿಸಲಾಯಿತು.
3. ಮೂರು ಪಹಣಿ ಪತ್ರಿಕೆಗಳನ್ನು ನಿಪಿ.2 ರಿಂದ 4 ಎಂದು ಗುರುತಿಸಲಾಯಿತು.
4. ಕಾನೂನುಬದ್ಧ ನೋಟಿಸಿನ ಕಚೇರಿ ಪ್ರತಿಯನ್ನು ನಿಪಿ.5 ಎಂದು ಗುರುತಿಸಲಾಯಿತು.
5. 6 ಅಂಚೆ ರಶೀದಿಗಳನ್ನು ನಿಪಿ.6 ರಿಂದ 11 ಎಂದು ಗುರುತಿಸಲಾಯಿತು.
6. ಎರಡು ಅಂಚೆ ಸ್ವಿಕೃತಿಗಳನ್ನು ನಿಪಿ.12 ಮತ್ತು 13 ಎಂದು ಗುರುತಿಸಲಾಯಿತು.
7. ತರುಣ-ಭಾರತ ದಿನ ಪತ್ರಿಕೆಯನ್ನು ನಿಪಿ.14 ಎಂದು ಗುರುತಿಸಲಾಯಿತು. ಅದರ ಆಯ್ದುಭಾಗವನ್ನು ನಿಪಿ.14(ಎ) ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಯನ್ನು ವಾದಿ ಪರ ವಕೀಲರ ವಿನಂತಿಯ ಮೇರೆಗೆ ಮುಂದುಡಲಾಯಿತು.**

(ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ**
**ಖಾನಾಪೂರ.**